
## ಪದಬಂಧ




### ಎಡದಿಂದ ಬಲಕ್ಕೆ

1. ಭಾವನಿರುವ ಊರಿನಲ್ಲಿ ಎಲ್ಲದಕ್ಕೂ ಕೊರತೆ 3
3. ಪರೀಕ್ಷೆಯ ಅನುಭವ ಸಿಕ್ಕಿತು. ಆದರೆ ಪ್ರತ್ಯಕ್ಷವಾಗಿ ಅಲ್ಲ 3
4. ದ್ವೇಷಕ್ಕೆ ಗುರಿಯಾದವರ ಸಂಖ್ಯೆ ಹತ್ತು ಮುಟ್ಟಿದೆ 3
6. ಪರಾಕ್ರಮದ ಪ್ರದರ್ಶನಕ್ಕೆ ಒಂದು ಸಲಕರಣೆ 4
7. ಮುಂದಿನದೇನೇ ಆಗಲಿ, ಮರ್ಯಾದೆಯನ್ನೇ ಐಶ್ವರ್ಯವನ್ನಾಗಿ ಹೊಂದಿರುವವ 4
9. ನ್ಯಾಯ ನೀತಿಗಳನ್ನು ಹೇಳುವವನಿಗೆ ಪ್ರಿಯವಾದದ್ದು ಬೆಣ್ಣೆಯೇ ತಾನೇ? 4
11. ತುಂಬ ಅಪಾಯಕಾರಿಯಾಗಿತ್ತು ಆತ ಎಸಗಿದ ದ್ರೋಹ 4
15. ವ್ಯಾಸಂಗವನ್ನು ಮಾಡುವಾತನಿಗೆ ಒಪ್ಪವಾಗುವಂತಿದೆ ಆತನ ವಸ್ತ್ರ 3
16. ರಾಧಾಕೃಷ್ಣರ ಪಯಣದ ಹಾದಿಯಲ್ಲಿ ಚೆಲ್ಲಿದ್ದು ಹೇಗೆ ರಕ್ತ? 3
17. ಕಾಡಿನ ಸಂಪತ್ತಿನ ರಕ್ಷಣಾ ಕಾರ್ಯ ಸರಳವಾದದ್ದಲ್ಲ 3

### ಮೇಲಿನಿಂದ ಕೆಳಕ್ಕೆ

1. ಅಮ್ಮನ ಕ್ಷೇಮಪಾಲನೆ ಮಾಡದಿರುವ ಅಪರಾಧ ಮನ್ನಿಸುವಂಥದಲ್ಲ 3
2. ಕೊನೆಗೂ ದರ್ಶನಕ್ಕೆ ದೊರಕಿತು ಗೋವಿಂದನ ಮುಖ 3
3. ಪಕ್ಕದ ಮನೆಯವರಿಗೆ ದೊರಕಿದ್ದು ಸ್ಪರ್ಧೆಯಲ್ಲಿ ಗೆದ್ದ ಪಾರಿತೋಷಕ 3
5. ಆತನ ವಿಕ್ರಮಗಳನ್ನೆಲ್ಲ ವಿವರಿಸುವಂತಹ ಪದ್ಯ ಇದು 3
6. ಪಾತಕದ ಕೆಲಸವನ್ನು ಮಾಡಲು ಯತ್ನಿಸಿದವನೇ ಕೆಳಕ್ಕೆ ಬಿದ್ದ 3
8. ಆಕೆ ನಸು ನಕ್ಕರೆ ಇಲ್ಲವೆಂದೇ ಅರ್ಥ 3
10. ನೀವಿರದ ಯಾವುದೇ ಪ್ರದೇಶದಲ್ಲೂ ಸದಾ ನಿಶ್ಶಬ್ದ 3
12. ದರ್ಪಣದ ಹಿಂದೆ ಅದೇನು ಮತ್ತೊಂದು ಹಾಳೆ? 3
13. ಕಾನನವನ್ನು ನೋಡಲು ಹೋದವರಿಗೆ ಸಿಕ್ಕಿದ್ದು ಚಿನ್ನ! 3
14. ವರ್ಣನೆಗೆ ನಿಲುಕದಂಥ ಸಾಮರ್ಥ್ಯದವ ಸಾಗರ ದೇವತೆ 3

---

### 29—04—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅನುಪಮ 3. ಮರುಳು 4. ನಪಾಸು 6. ಕುದುರಿಸಿ 7. ಮೇಣಕೆ 9. ಕರಿದು 11. ನಿಶಾನೆ 13. ಹರುಕು 15. ಅಂಬಾಸುತ 17. ರದ್ದತಿ 18. ವರ್ಜಿತ 19. ಮನ್ವಂತರ

**ಮೇಲಿನಿಂದ ಕೆಳಕ್ಕೆ**

1. ಅಳುಕು 2. ಮನಸು 3. ಮಜ್ಜನ 5. ಸುಪಾರಿ 7. ಮೇದಿನಿ 8. ಕೆತ್ತನೆ 9. ಕಲಹ 10. ದುಡುಕು 12. ಶಾರೀರ 14. ರುದಿತ 15. ಅಂತಿಮ 16. ತವರ


ಪ್ರಶ್ನಾಂಕಣ

# ಇರುವೆ ಅವತರಣ: ಎಷ್ಟು ಪ್ರಾಚೀನ?

ಇರುವೆ ಇರುವೆ ಎಲ್ಲಿರುವೆ? ಎಂದು ಕೇಳಿದರೆ ಎಲ್ಲೆಲ್ಲಿಯೂ ಇರುವೆ ಎಂದು ಉತ್ತರಿಸಬಲ್ಲ ಸರ್ವಾಂತರ್ಯಾಮಿ ಜೀವಿ ಅದು. ಭೂ ನೆಲದಲ್ಲಿ ಅಂಟಾರ್ಕ್ಟಿಕಾ, ಗ್ರೀನ್‌ಲ್ಯಾಂಡ್ ಇತ್ಯಾದಿ ಅತಿ ಶೀತಲ ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಲ್ಲ ಪ್ರದೇಶಗಳಲ್ಲೂ ಇರುವೆಗಳ ವಾಸ್ತವ್ಯ. ಹಾಗೆ ಎಲ್ಲೆಲ್ಲೂ ಹರಡಲು ಸೂಕ್ತವಾಗುವಂತೆ ಇರುವೆಗಳದು ಭಾರೀ ಸಂಖ್ಯೆಯ ಪ್ರಭೇದ ವೈವಿಧ್ಯ. ಈವರೆಗೆ ಗುರುತಿಸಿ ಹೆಸರಿಸಲಾಗಿರುವಂತೆ ಪ್ರಸ್ತುತ ಪ್ರಪಂಚದಲ್ಲಿ 12,500 ಪ್ರಭೇದಗಳ ಇರುವೆಗಳಿವೆ: ಕೆಂಪಿರುವೆ, ಕಂದಿರುವೆ, ಕಪ್ಪಿರುವೆ, ಕಟ್ಟಿರುವೆ, ದಂಡಿರುವೆ, ರೈತ ಇರುವೆ, ಎಲೆ ಹರುಕ ಇತ್ಯಾದಿ,... (ಚಿತ್ರಗಳಲ್ಲಿ ಗಮನಿಸಿ). ಇನ್ನೂ ಕನಿಷ್ಠ ಹತ್ತು ಸಾವಿರದಷ್ಟಾದರೂ ಅಜ್ಞಾತ ಇರುವೆ ಪ್ರಭೇದಗಳು ಇರಬಹುದೆಂದು ಜೀವವಿಜ್ಞಾನಿಗಳು ಭಾವಿಸಿದ್ದಾರೆ.

ಪ್ರಸಿದ್ಧ ಸಂಘ ಜೀವಿ ಆಗಿರುವ, ಜೇನ್ನೊಣ, ಕದಿರಿಬ್ಬೆಗಳಂತೆ ಉಪಯುಕ್ತ ಕೀಟವೂ ಆಗಿರುವ ಇರುವೆಗಳು ಧರೆಯಲ್ಲಿ ಎಷ್ಟು ಕಾಲ ಹಿಂದಿನಿಂದ ನೆಲೆಸಿವೆ? ಇರುವೆಗಳ ಪ್ರಾಚೀನತೆ ಎಷ್ಟು?

ಪಳೆಯುಳಿಕೆಗಳ ಸಾಕ್ಷ್ಯದಿಂದ ಇತ್ತೀಚಿನವರೆಗೂ ತಿಳಿದಿದ್ದಂತೆ ಇರುವೆಗಳು 100 ದಶಲಕ್ಷ ವರ್ಷಗಳ ಹಿಂದಿನಿಂದ, ಎಂದರೆ ಹತ್ತು ಕೋಟಿ ವರ್ಷ ಹಿಂದಿನಿಂದ ಪೃಥ್ವಿಯಲ್ಲಿವೆ. ಆ ಕಾಲದಲ್ಲಿ ಇರುವೆಗಳ ಒಂದು ಪ್ರಾಚೀನ ಪ್ರಭೇದ ದಕ್ಷಿಣ ಅಮೆರಿಕ ಖಂಡದಲ್ಲಿ ಬಾಳುವೆ ನಡೆಸಿತ್ತು. ಅರ್ಧ ಅಂಗುಲ ಉದ್ದ ಇದ್ದ ಆ ಪ್ರಭೇದ ಅತ್ಯುಗ್ರ ಮತ್ತು ಬಲಾಢ್ಯ ಬೇಟೆಗಾರನಾಗಿತ್ತು. ಆ ಇರುವೆಗೆ ಅದರ ಬಾಯಿಯಿಂದ ಮೇಲ್ಮುಖನಾಗಿ ತಿರುಗಿಸಿದ ಕುಡುಗೋಲಿನ ಆಕಾರದ ಎರಡು ದವಡೆ ಹಲ್ಲುಗಳು ಚಾಚಿದ್ದು ಅವುಗಳ ನಡುವೆ ಈಟಿಯಂತೆ ಚಾಚಿದ ಒಂದು ಕೊಂಬು ಕೂಡ ಇತ್ತು! ಬೇಟೆಗೆ ಸಿಕ್ಕಿದ ಬಲಿ ಕೀಟಗಳನ್ನು ಕೊಂಬಿನಿಂದ ತಿವಿದು ಹಿಡಿದು, ದವಡೆ ಹಲ್ಲುಗಳಿಂದ ಕತ್ತರಿಸಿ ಹಾಕುತ್ತಿದ್ದ ಈ ಭಯಂಕರ ಬೇಟೆಗಾರನಿಗೆ ಅದಕ್ಕೇ ನರಕದ ಇರುವೆ (ಹೆಲ್ ಆಂಟ್) ಎಂಬ ರೂಪಾನ್ವಯ ಹೆಸರು! ಡೈನೋಸಾರ್‌ಗಳ ಸಮಕಾಲೀನರಾಗಿದ್ದ ಇದೇ ನರಕದ ಇರುವೆಗಳ ಸಂಕುಲದಿಂದಲೇ ಈಗಿನ ಎಲ್ಲ ಇರುವೆ ಪ್ರಭೇದಗಳೂ ವಿಕಸನಗೊಂಡಿವೆ.




ವಿಸ್ಮಯ ಏನೆಂದರೆ, ಅತ್ಯಂತ ಇತ್ತೀಚೆಗೆ ಬ್ರೆಜಿಲ್ ದೇಶದ ಒಂದು ವಿಶ್ವವಿದ್ಯಾಲಯದ ಮ್ಯೂಜಿಯಂನಲ್ಲಿ, ಇನ್ನೂ ವರ್ಗೀಕರಿಸದೆ ಉಳಿದಿದ್ದ ಪಳೆಯುಳಿಕೆಗಳ ರಾಶಿಯಲ್ಲಿ ನರಕದ ಇರುವೆಯೊಂದರ ಪಳೆಯುಳಿಕೆ ಸಿಕ್ಕಿದೆ. ಸುಣ್ಣ ಶಿಲೆಯಲ್ಲಿ ಒಡಮೂಡಿರುವ ಆ ಪಳೆಯುಳಿಕೆ 113 ದಶಲಕ್ಷ ವರ್ಷ ಹಿಂದಿನ ಕಾಲದ್ದಾಗಿದೆ!

ಹಾಗೆಂದರೆ ಇರುವೆಗಳ ಪ್ರಾಚೀನತೆ ಈವರೆಗೆ ತಿಳಿದಿದ್ದಕ್ಕಿಂತ ಹದಿಮೂರು ದಶಲಕ್ಷ ವರ್ಷ ಹೆಚ್ಚು ಹಿಂದಿನದು ಎಂಬುದು ಸ್ಪಷ್ಟ ತಾನೇ? ಈ ಅತ್ಯಂತ ಪ್ರಾಚೀನ ಇರುವೆ ಪಳೆಯುಳಿಕೆಯ ಶೋಧದ ಮಹತ್ವದ ವಿವರಗಳು ಸುಪ್ರಸಿದ್ಧ ವಿಜ್ಞಾನ ಜರ್ನಲ್ 'ಕರೆಂಟ್ ಬಯಾಲಜಿ'ಯಲ್ಲಿ ಇದೇ ಕಳೆದ ಏಪ್ರಿಲ್ ತಿಂಗಳಲ್ಲಿ ಪ್ರಕಟವಾಗಿದೆ.

■ ಎನ್. ವಾಸುದೇವ್